

ನಾನು ಹೈಸ್ಕೂಲು ಓದುತ್ತಿದ್ದ ದಿನಗಳವು... ಅಣ್ಣ, ನಮ್ಮ ಕುಟುಂಬಕ್ಕೆ ಆಪ್ತರಾಗಿದ್ದ ಮೈಸೂರಿನ ಪುಟ್ಟಸ್ವಾಮಿ ಅವರಿಂದ ಬಜಾಜ್ ಚೇತಕ್ ಸ್ಕೂಟರ್ ಕೊಂಡುಕೊಂಡರು. ಅದನ್ನು ಮೈಸೂರಿನಿಂದ ನಾನು ಮತ್ತು ಅಣ್ಣ ಓಡಿಸಿಕೊಂಡು ಬರುವುದೆಂದು ನಿರ್ಧಾರವಾಯಿತು. ಅದರ ಜೊತೆಗೆ ಪುಟ್ಟಸ್ವಾಮಿ ಅವರ ಮನೆಯಲ್ಲಿ ಮರಿ ಹಾಕಿದ್ದ ಪೊಮೇರಿಯನ್ ನಾಯಿಮರಿಯೊಂದನ್ನು ತೆಗೆದುಕೊಂಡು ಹೋಗುವುದಕ್ಕೆ ಅಣ್ಣ ಒಪ್ಪಿದ್ದು, ಮಾತಿಗೆ ನಿಲುಕದ ನನ್ನ ಕರುಳಿನ ಆಸೆಯನ್ನು ಮುಟ್ಟಿದಂತಾಗಿತ್ತು. ಚೌಕಾಕಾರದ ತೂತುತೂತು ಪ್ಲಾಸ್ಟಿಕ್ ಬುಟ್ಟಿಬ್ಯಾಗ್‌ನಲ್ಲಿ ಬೆಣ್ಣೆಮುದ್ದೆಯಂತಿದ್ದ ಎರಡು ತಿಂಗಳ ನಾಯಿಮರಿಯನ್ನು ಕೂರಿಸಿಕೊಂಡು ನಾನು, ಅಣ್ಣ ಹಾಸನಕ್ಕೆ ಹೊರಟೆವು.

ದಾರಿ ಮಧ್ಯದಲ್ಲಿ, ಕೆ.ಆರ್. ನಗರದ ದೇವಸ್ಥಾನದ ಹತ್ತಿರ ಸ್ಕೂಟರ್ ನಿಲ್ಲಿಸಿ ‘ಒಳಗೆ ನೋಡ್ಕೊಂಬರೋಣ ಬಾ’ ಅಂತ ಅಣ್ಣ ಕರೆದುಕೊಂಡು ಹೋದರು. ನಮ್ಮ ಕುಟುಂಬದ ಈ ಹೊಸ